

ಈ ಹರಡಿದ ನೀರ ತುದಿಯ ಆಚೆಗಿದೆ. ಅಲ್ಲಿಂದ ದೋಣಿಯನ್ನು ಉದ್ದಗಳುವಿನ ಸಹಾಯದಿಂದ ನಡೆಸಿಕೊಂಡು ಬರಬೇಕು. ಆದರೆ ಏನೇ ಹೇಳಿ. ಅವನೊಬ್ಬ ಸ್ಥಳೀಯ ಪಕ್ಷಿ ತಜ್ಞ. ಕಡಲ ಪಕ್ಷಿಗಳ ವರ್ತನೆ ಬಗ್ಗೆ ಆತನ ಜ್ಞಾನ ಮಾತ್ರ ದೊಡ್ಡದು.

ಇಲ್ಲಿ ಎಷ್ಟೊಂದು ದೋಣಿಗಳ ನಿಲ್ಲಿಸಿ ಹೋದ ಜನರಿದ್ದಾರೆ. ಅವರಲ್ಲಿ ಇವನೊಬ್ಬ ಮಾತ್ರ ಫೋಟೋಗ್ರಫಿ ನಡೆಸುವ ನಮ್ಮಂಥ ತಿಕ್ಕಲರ ಜೊತೆ ಪಳಗಿ ಹದವಾಗಿದ್ದಾನೆ. ಅವನಿಗೆ ನೀರ ಮೇಲೆ ದೋಣಿ ಎಲ್ಲಿ ಮತ್ತು ಹೇಗೆ? ನಿಲ್ಲಿಸಬೇಕು. ಪಟ ತೆಗೆಯುವವರಿಗೆ ಬೆಳಕು ಯಾವ ಕಡೆಯಿಂದ ಬಿದ್ದರೆ ಚೆನ್ನ. ಯಾವ ಹಕ್ಕಿ ಯಾವ ಕಡೆಯಿಂದ ಯಾವ ದಿಕ್ಕಿಗೆ ಹಾರುತ್ತದೆ ಎಂಬ ಮಾಹಿತಿ ಪಕ್ಕಾ ಇದೆ ಎಂದು ನಾನು ಮಾತಾಡುತ್ತಿದ್ದ ಹೊತ್ತಿಗೆ ಆತ ಮೂಡಲದ ಕಡೆಯ ನೀರ ಸೀಳಿ ಮೂಡಿದ. 'ಅಬ್ಬಾ! ಬಂದ ಸರ್' ಎಂದು ಶ್ರೀಕಾಂತ್ ಶಾಲಾ ಮಗುವಿನಂತೆ ಸಂಭ್ರಮಪಟ್ಟರು. ಅವರಿಗೆ ಕಡಲಿಗಿಳಿಯುವ ಅವಸರ.

ಅಸಲಿಗೆ ನಾರಾಯಣ ಖಾರ್ವಿ ಸಮುದ್ರ ಹೆಚ್ಚುವರಿಯಾಗಿ ಮೈ ಚಾಚಿದ ಕಡೆಯಲ್ಲಿ ಕಪ್ಪೆಚಿಪ್ಪು ತೆಗೆಯುವ ಕಾಯಕ ಮಾಡುವವನು. ಬಿಡುವಾದಾಗ ಮಾತ್ರ ಫೋಟೋಗ್ರಫಿ ಮಾಡುವ ಜನರಿಗೆ ನೀರಿನ ಸಫಾರಿ ಮಾಡಿಸಬಲ್ಲಾತ. ಇದೀಗ ನಮ್ಮನಾತ ಕರೆದ್ಯೊಯುವ ಜಾಗವೂ ಕೂಡ ಮುಖ್ಯ ಕಡಲಲ್ಲ. ಭೋರ್ಗರವ ಶರಧಿಯ ಮಡಿಲಿನ ತೀರಾ ಸಮೀಪ ಅದು ಇರುವುದು. ಹೆಚ್ಚು ಅಲೆಗಳಿಲ್ಲದ; ನದಿ ಸಾಗರದೊಡಲ ಸೇರುವ ಸಂಗಮ ಸ್ಥಳ.

ಇಲ್ಲಿ ಇಣುಕಿ ನೋಡಿದರೆ ಸ್ಫುಟವಾದ ನೆಲವೆಲ್ಲಾ ಕಾಣುತ್ತಿದೆ. ಆದರೆ, ಈ ನೀರೊಳಗಿನ ಭೂಮಿಯ ಸಹವಾಸ ಮಾತ್ರ ಕೆಟ್ಟದು. ಏಕೆಂದರೆ ಆಳದಲ್ಲಿ ಹೊಳೆವ ಹಳದಿ ಕಿಟ್ಟದಂತೆ ಕಾಣುವ ಕಲ್ಲುಗಳು ಇದ್ದಾವಲ್ಲ ಅವು ಬ್ಲೇಡಿನಷ್ಟು ಚೂಪಾದವು. ಅದರ ಮೇಲೆ ಕಾಲಿಟ್ಟವನ ಕಥೆ ಮುಗಿದಂತೆ. ಚಣ ಮಾತ್ರದಲ್ಲಿ ಕಾಲನ್ನು ಕಲ್ಲಂಗಡಿಯಂತೆ ಕೊಯ್ದು ಬಿಸಾಕುವಷ್ಟು ಸಾಮರ್ಥ್ಯವಿರುವ ಅಪಾಯಕಾರಿ ಶಿಲೆಗಳಿವು. 'ಇವುಗಳ ಕಿರಿಕಿರಿ ಇಲ್ಲದ ನುಣುಪಾದ ಮರಳಿನ ಜಾಗೆಯಲ್ಲಿ ನೋಡಿ ಇಳಿಸುತ್ತೇನೆ ಸರ. ಅಲ್ಲಿ ನೀವು